# ಅಲ್ಮಾಟಿಯ ಅಸ್ಮಿತೆ

## ಸೆಂಟ್ರಲ್ ಮ್ಯೂಸಿಯಂ, ಮೆಮೊರಿಯಲ್ ಆಫ್ ಗ್ಲೋರಿ, ಝೆಂಕೋವ್ ಕೆಥೆಡ್ರಲ್

■ ಗೀತಾ ಕುಂದಾಪುರ



ಮನುಷ್ಯನ ಕಲೆಗಾರಿಕೆಗೆ ಸಾಕ್ಷಿಯಾದ ಝೆಂಕೋವ್ ಕೆಥೆಡ್ರಲ್

ಮಧ್ಯ ಏಷ್ಯಾದಲ್ಲಿರುವ ಕಜಕಿಸ್ತಾನ, ಹಿಂದೆ USSRನ ಭಾಗವಾಗಿದ್ದು, 1991ರಲ್ಲಿ ಸ್ವತಂತ್ರವಾಯಿತು. ಅಲ್ಮಾಟಿ ಕಜಕಿಸ್ತಾನದ ಆಗ್ನೇಯ ದಿಕ್ಕಿನಲ್ಲಿರುವ ನಗರ. ‘ಆಸ್ತಾನ’ ಕಜಕಿಸ್ತಾನದ ರಾಜಧಾನಿಯಾದರೂ ಅಲ್ಮಾಟಿಯೂ ಆರ್ಥಿಕವಾಗಿ ಸಾಕಷ್ಟು ಮುಂದುವರಿದಿದ್ದು, ಆಧುನಿಕ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಹಿಂದೆ ಬಿದ್ದಿಲ್ಲ.

ಅಲ್ಮಾಟಿಯ ಸುತ್ತಮುತ್ತಲಿನ ಸರೋವರಗಳು, ಕಣಿವೆ ಪ್ರದೇಶಗಳು, ಹಸುರಿನಿಂದ ತುಂಬಿದ ಬೆಟ್ಟಗುಡ್ಡಗಳು ಪ್ರಕೃತಿ ಪ್ರೇಮಿಗಳನ್ನು ತನ್ನೆಡೆಗೆ ಆಕರ್ಷಿಸುತ್ತವೆ. ಚಳಿಗಾಲದಲ್ಲೂ ದಟ್ಟ ಮಂಜು ತುಂಬಿದ ಬೆಟ್ಟಗುಡ್ಡಗಳು ಸಾಹಸಿಗರನ್ನು ಸೆಳೆಯುತ್ತವೆ. ಅಲ್ಮಾಟಿ ತನ್ನ ಸಂಸ್ಕೃತಿಯನ್ನು ವಿದೇಶಿ ಪ್ರವಾಸಿಗರಿಗೆ ಪರಿಚಯಿಸುವಲ್ಲಿ ಸದಾ ಮುಂದು. ಅಲ್ಮಾಟಿಯ ಅಸ್ಮಿತೆಯನ್ನು ಸಾರುವ ಈ ಸ್ಮಾರಕಗಳು ಪ್ರವಾಸಿಗರ ಮೆಚ್ಚಿನ ಸ್ಥಳಗಳು.

### ಸೆಂಟ್ರಲ್ ಮ್ಯೂಸಿಯಂ

ಒಂದು ದೇಶದ ಇತಿಹಾಸ, ಪ್ರಸ್ತುತತೆ, ಜಾನಪದ, ರೀತಿ ರಿವಾಜನ್ನು ತಿಳಿಯಬೇಕೆಂದರೆ ಅಲ್ಲಿನ



ಇತಿಹಾಸದ ಕುರುಹುಗಳನ್ನು ಕಾಪಿಟ್ಟುಕೊಂಡಿರುವ ಸೆಂಟ್ರಲ್ ಮ್ಯೂಸಿಯಂ